OCTOBER 07, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **ರಾಮಾಯಣ ಮಹಾಕಾವ್ಯದ ಕರ್ತೃ, ಮಹರ್ಷಿ ಶ್ರೀ ವಾಲ್ಮೀಕಿ ಅವರ ಜಯಂತ್ಯುತ್ಸವ ಇಂದು; ನಾಡಿನಾದ್ಯಂತ ಶ್ರದ್ಧಾ–ಭಕ್ತಿಯಿಂದ ಆಚರಣೆ.**
- **ವಿಜಯಪುರದ ಮಳಸಿದ್ದ ನಾಯಕೋಡಿ ಹಾಗೂ ವಿಜಯನಗರದ ಕೆ.ಉಚ್ಚಂಗಪ್ಪ ಸೇರಿ, ಐವರು ಸಾಧಕರಿಗೆ, ಮಹರ್ಷಿ ವಾಲ್ಮೀಕಿ ಪ್ರಶಸ್ತಿ.**
- **ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು, ಜೋಗದಲ್ಲಿ, 2 ಸಾವಿರ ಮೆಗಾ ವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆ ಗುರಿ.**
- **ಬೆಳಗಾವಿ ಜಿಲ್ಲೆ, ಕಿತ್ತೂರಿನಲ್ಲಿ, ಇದೇ 23 ರಂದು, ಐತಿಹಾಸಿಕ ಕಿತ್ತೂರು ಉತ್ಸವ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಮಾಯಣ ಮಹಾಕಾವ್ಯದ ಕರ್ತೃ, ಮಹರ್ಷಿ ಶ್ರೀ ವಾಲ್ಮೀಕಿ ಅವರ ಜಯಂತ್ಯುತ್ಸವವನ್ನು, ಇಂದು ನಾಡಿನಾದ್ಯಂತ ಶ್ರದ್ಧಾ–ಭಕ್ತಿಯಿಂದ ಆಚರಿಸಲಾಗುತ್ತಿದೆ.**

**ಬೆಂಗಳೂರಿನ, ನಾಗರಾಜು ಗಾಣದ ಹುಣಸೆ, ಚಿತ್ರದುರ್ಗದ ಪಿ.ತಿಪ್ಪೇಸ್ವಾಮಿ, ಕೊಡಗಿನ ಜೆ.ಕೆ.ಮುತ್ತಮ್ಮ, ವಿಜಯಪುರದ ಮಳಸಿದ್ದ ಲಕ್ಷ್ಮಣ ನಾಯಕೋಡಿ ಹಾಗೂ ವಿಜಯನಗರ ಜಿಲ್ಲೆಯ ಕೆ.ಉಚ್ಚಂಗಪ್ಪ ಪ್ರಸಕ್ತ ಸಾಲಿನ, ಪ್ರತಿಷ್ಠಿತ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ, ಭಾಜನರಾಗಿದ್ದಾರೆ. ಪ್ರಶಸ್ತಿ ನಗದು ಬಹುಮಾನ ಹಾಗೂ ಬಂಗಾರದ ಪದಕವನ್ನು ಒಳಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್ ಮಾಧ್ಯಮದಲ್ಲಿ, ಅಭಿನಂದಿಸಿ, ಐವರು ಸಾಧಕ ಮಹನೀಯರ ಸಾಧನೆ, ಸಮಾಜಕ್ಕೆ ಮಾದರಿಯಾಗಲಿ ಎಂದಿದ್ದಾರೆ.**

ಬೆಂಗಳೂರಿನಲ್ಲಿ ಇಂದು ಬೆಳಗ್ಗೆ 10.30ಕ್ಕೆ ಆಯೋಜಿತ, ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವದ, ಪ್ರಧಾನ ಕಾರ್ಯಕ್ರಮದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವರು ಮತ್ತು ವಿಶೇಷ ಆಹ್ವಾನಿತ ಗಣ್ಯರು, ಪಾಲ್ಗೊಳ್ಳಲಿದ್ದಾರೆ. ಶಾಸಕರ ಭವನದ ಮುಂಭಾಗದ, ತಪೋವನದಲ್ಲಿರುವ ಮಹರ್ಷಿ ವಾಲ್ಮೀಕಿ ಪ್ರತಿಮೆಗೆ, ಬೆಳಗ್ಗೆ 10 ಗಂಟೆಗೆ ಗಣ್ಯರು ಗೌರವಾರ್ಪಿಸಲಿದ್ದಾರೆ. ಬಳಿಕ, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿತವಾಗಿದೆ.

<><><>

ಮಹರ್ಷಿ ವಾಲ್ಮೀಕಿ ಶ್ರೇಷ್ಠತೆ ಬಗ್ಗೆ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಹಿರಿಯ ಸಾಹಿತಿ ಹಾಗೂ ವಿಮರ್ಶಕ, ಹುಬ್ಬಳ್ಳಿಯ ಶಾಮಸುಂದರ ಬಿದರಕುಂದಿ.

<><><>

ಶಾಮಸುಂದರ ಬಿದರಕುಂದಿ ಧ್ವನಿ 47 ಸೆಕೆಂದುಗಳು

<><><>

ಇಂದು ಬೆಳಗ್ಗೆ 10:30ಕ್ಕೆ ಕಲಬುರಗಿಯ, ಸರ್ದಾರ ವಲ್ಲಭಭಾಯಿ ಪಟೇಲ ವೃತ್ತದಿಂದ ಎಸ್.ಎಂ ಪಂಡಿತ ರಂಗಮಂದಿರದ ವರೆಗೆ, ವಾಲ್ಮೀಕಿ ಜಯಂತಿ ಅಂಗವಾಗಿ, ಶೋಭಾ ಯಾತ್ರೆಯನ್ನು, ಜಿಲ್ಲಾಡಳಿತ ಸಂಘಟಿಸಿದೆ.

<><><>

ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲೂಕಿನ, ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ 650 ಕೋಟಿ ರೂಪಾಯಿ ಮೀಸಲಿರಿಸಿ, ಮುಕ್ಕುಂಬಿ ಕೆರೆಗೆ ಜಲ ಮರುಪೂರಣ ಮಾಡಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. 2 ಸಾವಿರ ಕೋಟಿ ರೂಪಾಯಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಕೊಪ್ಪಳದಲ್ಲಿ ಶಿಲಾನ್ಯಾಸ ನೆರವೇರಿಸಿ, ಅವರು ಮಾತನಾಡಿದರು. ಅನ್ನಭಾಗ್ಯ ಯೋಜನೆಯಡಿ, ಕೊಪ್ಪಳ ಜಿಲ್ಲೆಯಲ್ಲಿ, 1 ಕೋಟಿ 96 ಲಕ್ಷ ಜನರಿಗೆ, ದವಸ, ಧಾನ್ಯಗಳನ್ನು ವಿತರಿಸಲಾಗಿದೆ. ಗೃಹಲಕ್ಷ್ಮೀ ಯೋಜನೆಯಡಿ, ಜಿಲ್ಲೆಯ 3 ಲಕ್ಷ, 17 ಸಾವಿರದ 776 ಮಹಿಳೆಯರಿಗೆ, ಸಾವಿರದ 283 ಕೋಟಿ ರೂಪಾಯಿ ನೀಡಲಾಗಿದೆ ಎಂದರು.

<><><>

ಮಧ್ಯಪ್ರದೇಶದಲ್ಲಿ, ಮಕ್ಕಳ ಸಾವಿಗೆ ಕಾರಣವಾದ, ಕೆಮ್ಮಿನ ಔ ’ಧಿ, ರಾಜ್ಯದಲ್ಲಿ ಪೂರೈಕೆ ಅಥವಾ ಸರಬರಾಜಾಗಿಲ್ಲ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ ಸ್ಪಷ್ಟ ಪಡಿಸಿದ್ದಾರೆ. ಹಾಸನ ಜಿಲ್ಲೆ, ಚನ್ನರಾಯಪಟ್ಟಣದಲ್ಲಿ, ಆರೋಗ್ಯ ಮೇಳಕ್ಕೆ ಚಾಲನೆ ನೀಡಿ, ಮಾತನಾಡಿದರು. ಔ ’ಧಿಗಳ ಉತ್ಪಾದನೆ, ಪೂರೈಕೆ ಮತ್ತು ಮಾರಾಟದ ವಿಚಾರವಾಗಿ, ಉತ್ತರದಾಯಿತ್ವ ಮತ್ತು ಎಲ್ಲ ಹಂತಗಳಲ್ಲಿ ಪಾರದರ್ಶಕತೆ ಖಾತ್ರಿ ಪಡಿಸುವ, ಅವಶ್ಯಕತೆ ಇದೆ. ಕೇಂದ್ರದ ಸಂಬಂಧಿತ ಸಚಿವಾಲಯಗಳಿಗೆ, ಪತ್ರ ಬರೆದು, ಒತ್ತಾಯಿಸಿದ್ದಾಗಿ, ಸಚಿವರು ತಿಳಿಸಿದರು. ಸಾವಿರದ 800 ಜನ, ಹೊಸ ವೈದ್ಯರ ನೇಮಕಾತಿಯಾಗಿದೆ. ವಿಶೇಷ ಪರಿಣತಿಯುಳ್ಳ ಸ್ನಾತಕೋತ್ತರ ಪದವಿಧರ ವೈದ್ಯರ, ನೇಮಕಾತಿಗೆ ಸದ್ಯದಲ್ಲೇ ಕ್ರಮ ಕೈಗೊಳ್ಳಲಾಗುವುದು ಎಂದು, ಅವರು ಹೇಳಿದರು.

<><><>

ಉತ್ತರಕನ್ನಡ ಜಿಲ್ಲೆಯಲ್ಲಿ, 2 ಸಾವಿರ ಕೋಟಿ ರೂಪಾಯಿ ಮೌಲ್ಯದ, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ, ಜನಪರವಾಗಿದ್ದು, ಪರಿಸರವಾದಿಗಳಿಗೆ ಮನವರಿಕೆ ಮಾಡಿಸಿ, ಯೋಜನಾ ಪ್ರದೇಶ ವ್ಯಾಪ್ತಿಯ, 120 ಎಕರೆ ಭೂ ಪ್ರದೇಶದ ಅರಣ್ಯೀಕರಣಕ್ಕೆ, ಕ್ರಮ ವಹಿಸಲಾಗುವುದು ಎಂದು, ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ. ಶಿವಮೊಗ್ಗ ಬಳಿ, ಭದ್ರಾ ಜಲಾಶಯಕ್ಕೆ ಭೇಟಿ ನೀಡಿ, ಪರಿಶೀಲನೆ ಬಳಿಕ, ಅವರು ಮಾತನಾಡಿದರು. ಮುಂಬರುವ ದಶಕಗಳಲ್ಲಿ, ರಾಜ್ಯದ ವಿದ್ಯುತ್ ಬೇಡಿಕೆ ಗಣನೀಯವಾಗಿ ಏರಿಕೆಯಾಗಲಿದೆ. ಶಿವಮೊಗ್ಗ ಜಿಲ್ಲೆ, ಕಾರ್ಗಲ್ ಬಳಿ, ಜೋಗದಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ, 2 ಸಾವಿರ ಮೆಗಾ ವ್ಯಾಟ್‌ನಷ್ಟು, ಹೆಚ್ಚುವರಿ ಪ್ರಮಾಣದ ಜಲ ವಿದ್ಯುತ್ ಉತ್ಪಾದಿಸಲು, ಯೋಜಿಸಲಾಗಿದೆ ಎಂದು ಅವರು, ನುಡಿದರು.

<><><>

ಈಗ ವಾಣಿಜ್ಯ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(31 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಬೆಳಗಾವಿ ಜಿಲ್ಲೆಯ, ಐತಿಹಾಸಿಕ ನಗರಿ, ಕಿತ್ತೂರಿನಲ್ಲಿ, ಇದೇ 23 ರಂದು, ಕಿತ್ತೂರು ಉತ್ಸವ ವಿಜೃಂಭಣೆಯಿಂದ ಜರುಗಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಕಿತ್ತೂರು ಉತ್ಸವದ, ಪೂರ್ವಭಾವಿ ಸಭೆ ನಡೆಸಿ, ಈ ವಿಷಯ ತಿಳಿಸಿದರು. ಕಿತ್ತೂರು ಉತ್ಸವಕ್ಕೆ, 5 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡುವಂತೆ, ಮುಖ್ಯಮಂತ್ರಿಯವರಿಗೆ ಮನವಿ ಮಾಡಿ, ಪ್ರಸ್ತಾವ ಸಲ್ಲಿಸಿದ್ದಾಗಿ, ತಿಳಿಸಿದರು. ಕಿತ್ತೂರು ಉತ್ಸವದ ಹಿನ್ನೆಲೆ, ಐತಿಹಾಸಿಕ ಸ್ಮಾರಕಗಳಿಗೆ, ವಿದ್ಯುತ್ ದೀಪಾಲಂಕಾರ, ನಗರ ಸ್ವಚ್ಛತೆ ಕಾರ್ಯ ನಡೆಯಲಿದೆ ಎಂದರು.

<><><>

ರಾಜ್ಯದ, ಹಿಂದುಳಿದ ವರ್ಗಗಳ ಆಯೋಗ ಕೈಗೊಂಡಿರುವ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ಪ್ರಗತಿಯನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಸಂಜೆ ಪರಿಶೀಲಿಸಲಿದ್ದಾರೆ. ಬಳಿಕ, ಗಣತಿಯ ಅವಧಿ ವಿಸ್ತರಣೆ ಕುರಿತು, ಸೂಕ್ತ ತೀರ್ಮಾನ ಕೈಗೊಳ್ಳುವುದಾಗಿ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಮುಖ್ಯಮಂತ್ರಿ ಪ್ರಕಟಿಸಿದ್ದಾರೆ.

ಈಗಾಗಲೇ, ರಾಜ್ಯಾದ್ಯಂತ, 1 ಕೋಟಿ 10 ಲಕ್ಷ ಕುಟುಂಬಗಳ ಗಣತಿ ಪೂರ್ಣಗೊಂಡಿದ್ದು, ಶೇಕಡ 63 ರಷ್ಟು ಪ್ರಗತಿ ಸಾಧಿಸಲಾಗಿದೆ, ಎಂದು, ಅವರು ತಿಳಿಸಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಎಕ್ಸ್ ಮಾಧ್ಯಮದಲ್ಲಿ, ಸಮೀಕ್ಷೆ, ಕೇವಲ ಅಂಕಿ–ಅಂಶಗಳ ಸಂಗ್ರಹವಲ್ಲ. ಭವಿಷ್ಯದಲ್ಲಿ ಜನಪರ ಯೋಜನೆಗಳನ್ನು ರೂಪಿಸಲು ಹಾಗೂ ಸಮಾಜದ ನೈಜ ಚಿತ್ರಣವನ್ನು ತಿಳಿಯುವ, ರಾಜ್ಯ ಸರ್ಕಾರದ ಪ್ರಾಮಾಣಿಕ ಪ್ರಯತ್ನ, ಎಂದಿದ್ದಾರೆ.

<><><>

ರಾಜ್ಯದ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಯೋಜನೆ ಅಡಿ ಹಾಗೂ ಕೇಂದ್ರ ಪುರಸ್ಕೃತ, ರಾಷ್ಟ್ರೀಯ ಜೀವನೋಪಾಯ ಮಿಷನ್ ಯೋಜನೆ ಅನ್ವಯ, ಧಾರವಾಡ ಜಿಲ್ಲಾ ಪಂಚಾಯಿತಿ ಆವರಣದಲ್ಲಿ, 'ಅಕ್ಕ ಕೆಫೆ'ಗೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಚಾಲನೆ ನೀಡಿದ್ದಾರೆ. ಕಬ್ಬೆನೂರು ಗ್ರಾಮದ, ಕಾಮಧೇನು ಮಹಿಳಾ ಸ್ವ ಸಹಾಯ ಸಂಘದ ಸದಸ್ಯೆಯರು, ಅಕ್ಕ ಕೆಫೆ ಚುಕ್ಕಾಣಿ ಹಿಡಿದಿದ್ದಾರೆ. ಅಕ್ಕ ಕೆಫೆ ಉಸ್ತುವಾರಿ, ಸಂಘದ ಪದಾಧಿಕಾರಿ, ರಾಜೇಶ್ವರಿ ಮಂಜುನಾಥ ಕವಾಡಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ರಾಜೇಶ್ವರಿ ಕವಾಡಿ ಧ್ವನಿ 41 ಸೆಕೆಂದುಗಳು

<><><>

ಯುವಜನರ ಆರೋಗ್ಯದ ಮೇಲೆ, ಮದ್ಯ ಹಾಗೂ ಮಾದಕ ವಸ್ತುಗಳು ಬೀರುವ, ದುಷ್ಪರಿಣಾಮಗಳ ಬಗ್ಗೆ, ಸಾಮಾಜಿಕ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿ, ಅರಿವು ಮೂಡಿಸಲು, ಕ್ರಮ ಕೈಗೊಳ್ಳುವುದಾಗಿ, ರಾಜ್ಯ ಮದ್ಯಪಾನ ಸಂಯಮ ಮಂಡಳಿ, ನೂತನ ಅಧ್ಯಕ್ಷ ಶರಣಪ್ಪ ಸಲಾದಪುರ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಂಡಳಿಯ ಅಧ್ಯಕ್ಷರಾಗಿ, ಅಧಿಕಾರ ವಹಿಸಿಕೊಂಡು, ಮಾತನಾಡಿದ ಅವರು, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ, ಮದ್ಯ ಮತ್ತು ಮಾದಕ ವಸ್ತುಗಳ ಸೇವನೆ ಪ್ರಮಾಣ ಕಳವಳಕಾರಿ ಮಟ್ಟದಲ್ಲಿದೆ. ಯುವಜನರನ್ನು ದುಶ್ಚಟಗಳಿಂದ ದೂರವಿರಿಸಲು, ಮಂಡಳಿ ಸರ್ವಸಾರ್ಥಕ ಪ್ರಯತ್ನ ಕೈಗೊಳ್ಳಲಿದೆ, ಎಂದರು.

<><><>

ತಲಪಾಡಿಯಿಂದ, ಕಾರವಾರದ ವರೆಗೆ, 350 ಕಿಲೋ ಮೀಟರ್ ಉದ್ದದ, ರಾಜ್ಯದ ಕರಾವಳಿ ತೀರದ, ಸಮಗ್ರ ಅಭಿವೃದ್ಧಿಗೆ, ಯೋಜನೆ ರೂಪಿಸಲಾಗುವುದು ಎಂದು, ಕರಾವಳಿ ಅಭಿವೃದ್ಧಿ ಮಂಡಳಿಯ ನೂತನ ಅಧ್ಯಕ್ಷ ಎಂ.ಎ. ಗಫೂರ ತಿಳಿಸಿದ್ದಾರೆ. ಮಂಡಳಿಯ ಅಧ್ಯಕ್ಷರಾಗಿ, ಮಂಗಳೂರಿನಲ್ಲಿ ಅಧಿಕಾರ ವಹಿಸಿಕೊಂಡು, ನೀತಿ ನಿಯಮಗಳ ಅಡಿ, ಕರಾವಳಿಗರ ಹಿತ ಕಾಯಲು, ತಮ್ಮ ಮಂಡಳಿ ಬದ್ಧ ಎಂದರು.

<><><>

ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, ಮುರಳಿ ಅಶೋಕ ಸಾಲಪ್ಪ ಬೆಂಗಳೂರಿನಲ್ಲಿ ಅಧಿಕಾರ ವಹಿಸಿಕೊಂಡಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

- **ರಾಮಾಯಣ ಮಹಾಕಾವ್ಯದ ಕರ್ತೃ, ಮಹರ್ಷಿ ಶ್ರೀ ವಾಲ್ಮೀಕಿ ಅವರ ಜಯಂತ್ಯುತ್ಸವ ಇಂದು; ನಾಡಿನಾದ್ಯಂತ ಶ್ರದ್ಧಾ-ಭಕ್ತಿಯಿಂದ ಆಚರಣೆ.**
- **ವಿಜಯಪುರದ ಮಳಸಿದ್ದ ನಾಯಕೋಡಿ ಹಾಗೂ ವಿಜಯನಗರದ ಕೆ.ಉಚ್ಚಂಗಪ್ಪ ಸೇರಿ, ಐವರು ಸಾಧಕರಿಗೆ, ಮಹರ್ಷಿ ವಾಲ್ಮೀಕಿ ಪ್ರಶಸ್ತಿ.**
- **ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು, ಜೋಗದಲ್ಲಿ, 2 ಸಾವಿರ ಮೆಗಾ ವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆ ಗುರಿ.**
- **ಬೆಳಗಾವಿ ಜಿಲ್ಲೆ, ಕಿತ್ತೂರಿನಲ್ಲಿ, ಇದೇ 23 ರಂದು, ಐತಿಹಾಸಿಕ ಕಿತ್ತೂರು ಉತ್ಸವ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>